ಜೆಎಸ್‌ಎಸ್ ಮಹಾವಿದ್ಯಾಪೀಠ
ಜಗದ್ಗುರು ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ, ಮೈಸೂರು

# ಜ್ಞಾನವಾರಿಧಿ–37

## ಸಾಪ್ತಾಹಿಕ ಡಿಜಿಟಲ್ ಉಪನ್ಯಾಸ ಕಾರ್ಯಕ್ರಮ

**16 ಆಗಸ್ಟ್ 2021 * ಸೋಮವಾರ * ಸಂಜೆ 6.00**

ದಿವ್ಯ ಸಾನ್ನಿಧ್ಯ

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**
ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ
ಸುತ್ತೂರು ಶ್ರೀಕ್ಷೇತ್ರ

ಉಪನ್ಯಾಸ



**ಪ್ರೊ. ಜಿ.ಬಿ. ಶಿವರಾಜು**
ಟ್ರಸ್ಟಿಗಳು, ಕಸ್ತೂರಬಾ ಗಾಂಧಿ ರಾಷ್ಟ್ರೀಯ ಸ್ಮಾರಕ ಟ್ರಸ್ಟ್
ಇಂದೋರ್ ಮತ್ತು ಅರಸೀಕೆರೆ

**ವಿಷಯ : ಗಾಂಧಿ ವಿಚಾರಗಳ ಪ್ರಸ್ತುತತೆ**

(ಉಪನ್ಯಾಸದ ನಂತರ ಆನ್‌ಲೈನ್‌ನಲ್ಲಿ ಬರುವ ಪ್ರಶ್ನೆಗಳಲ್ಲಿ ಆಯ್ದವುಗಳಿಗೆ ಉತ್ತರಿಸಲಾಗುವುದು)

LIVE STREAMING

ಆನ್‌ಲೈನ್ ಮೂಲಕ ನೇರವಾಗಿ ವೀಕ್ಷಿಸಲು ಹಾರ್ದಿಕ ಸ್ವಾಗತ

YouTube http://Youtube.com/c/JSSMahavidyapeethaonline

https://www.facebook.com/JSSMVP

**ಜ್ಞಾನವಾರಿಧಿ** ವಿಶೇಷ ಉಪನ್ಯಾಸ ಮಾಲೆ ಕಾರ್ಯಕ್ರಮವನ್ನು 2020ರ ಡಿಸೆಂಬರ್ ತಿಂಗಳಿನಿಂದ ಪ್ರತಿ ಸೋಮವಾರ ಏರ್ಪಡಿಸಿಕೊಂಡು ಬರಲಾಗುತ್ತಿದೆ. ಧರ್ಮ, ಅಧ್ಯಾತ್ಮ, ಯೋಗ, ಕಲೆ, ಸಾಹಿತ್ಯ, ಸಂಸ್ಕೃತಿ, ಆರೋಗ್ಯ, ಜೀವನಶೈಲಿ, ವಿಜ್ಞಾನ, ತಂತ್ರಜ್ಞಾನ ಮುಂತಾದ ವಿಷಯಗಳು ಮತ್ತು ಪ್ರಚಲಿತ ವಿದ್ಯಮಾನಗಳನ್ನು ಕುರಿತು ದೇಶ ಮತ್ತು ವಿದೇಶದ ವಿವಿಧ ಸಂಪನ್ಮೂಲ ವ್ಯಕ್ತಿಗಳಿಂದ ಉಪನ್ಯಾಸಗಳನ್ನು ಆಯೋಜಿಸಲಾಗುತ್ತಿದೆ. ಪ್ರತಿವರ್ಷದಂತೆ ಮೈಸೂರು ಶ್ರೀ ಸುತ್ತೂರು ಶಾಖಾಮಠದಲ್ಲಿ ಈ ವರ್ಷವೂ ಶ್ರಾವಣಮಾಸದ ಪ್ರವಚನ ಜರುಗುತ್ತಿದ್ದು ಪ್ರತಿ ಸೋಮವಾರ ಜ್ಞಾನವಾರಿಧಿ ಉಪನ್ಯಾಸ ನಡೆಯಲಿದೆ.

**ಪ್ರೊ. ಜಿ.ಬಿ. ಶಿವರಾಜುರವರು** ಇಂದೋರ್‌ನ ಕಸ್ತೂರಬಾ ರಾಷ್ಟ್ರೀಯ ಸ್ಮಾರಕ ಟ್ರಸ್ಟ್‌ನ ಟ್ರಸ್ಟಿಗಳು. ಬೆಂಗಳೂರು ಗಾಂಧಿ ಭವನದ ಉಪಾಧ್ಯಕ್ಷರು. ಸದ್ಯ ಅರಸೀಕೆರೆಯ ಕಸ್ತೂರಬಾ ಸಂಸ್ಥೆಯನ್ನು ಪುನಶ್ಚೇತನಗೊಳಿಸಿ ರಾಷ್ಟ್ರದ ಮಾದರಿ ಸಂಸ್ಥೆಯನ್ನಾಗಿ ರೂಪಿಸುತ್ತಿದ್ದಾರೆ. ಚಿಂತಕರು ಹಾಗೂ ಉತ್ತಮ ವಾಗ್ಮಿಗಳು. ಪ್ರಸ್ತುತ ದೆಹಲಿ ಗಾಂಧಿ ಸ್ಮಾರಕ ನಿಧಿ ಸದಸ್ಯರಾಗಿರುವ ಪ್ರೊ. ಶಿವರಾಜುರವರು ಗದಗಿನ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾಗಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಸದಸ್ಯರಾಗಿದ್ದರು.

ಕರ್ನಾಟಕ ಸರ್ಕಾರ ನಕ್ಸಲರ ಶರಣಾಗತಿಗಾಗಿ ರಚಿಸಿದ್ದ ನಕ್ಸಲರ ಶರಣಾಗತಿ ಮತ್ತು ಪುನರ್ವಸತಿ ಸಮಿತಿಯ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದಾರೆ. ಕರ್ನಾಟಕ ರಾಜ್ಯ ಎನ್‌ಎಸ್‌ಎಸ್ ಅಧಿಕಾರಿಗಳ ತರಬೇತಿ ಸಂಸ್ಥೆಯ ಪ್ರಥಮ ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿರುವರು. ಮಹಾತ್ಮ ಗಾಂಧೀಜಿಯವರ ಮೌಲ್ಯಗಳು ಹಾಗೂ ವಿಚಾರಧಾರೆಗಳನ್ನು ಯುವಜನರಿಗೆ ತಲುಪಿಸುವ ಸಂಕಲ್ಪವನ್ನು ತೊಟ್ಟು ಹಲವಾರು ಶಿಬಿರಗಳು ಮತ್ತು ಕಾರ್ಯಾಗಾರಗಳನ್ನು ಏರ್ಪಡಿಸುತ್ತಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯಲ್ಲಿರುವ ಸಬರಮತಿ ಆಶ್ರಮದ ಪ್ರತಿರೂಪ ಸ್ಥಾಪನೆಗೆ ಮಾರ್ಗದರ್ಶಕರಾಗಿದ್ದರು. "ಕರ್ನಾಟಕ ಗಾಂಧಿ ಡಾ. ಹೊ. ಶ್ರೀನಿವಾಸಯ್ಯ", "ಗಣ್ಯರು ಕಂಡ ಗಾಂಧಿ" ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಕೆಂಪೇಗೌಡ ಪ್ರಶಸ್ತಿ, ಗೊರೂರು ಸಾಹಿತ್ಯ ಪ್ರಶಸ್ತಿ ಸೇರಿದಂತೆ ಹಲವಾರು ಪ್ರಶಸ್ತಿ-ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ.

**ಜ್ಞಾನವಾರಿಧಿ-38 * 23 ಆಗಸ್ಟ್ 2021**

**ಕ್ಯಾಪ್ಟನ್ ಶ್ರೀ ಗಣೇಶ್ ಕಾರ್ಣಿಕ್**

ಮಾಜಿ ವಿಧಾನಪರಿಷತ್ ಸದಸ್ಯರು
ಉಡುಪಿ

**ವಿಷಯ**

ಭಾರತೀಯ ಸೈನ್ಯ ಹಾಗೂ ದೇಶಭಕ್ತಿ

**ಜ್ಞಾನವಾರಿಧಿ-39 * 30 ಆಗಸ್ಟ್ 2021**

**ಡಾ. ಬಿ.ಆರ್. ರಾಮಕೃಷ್ಣ**

ಕುಲಪತಿಗಳು, ಎಸ್-ವ್ಯಾಸ ವಿಶ್ವವಿದ್ಯಾಲಯ
ಜಿಗಣಿ, ಬೆಂಗಳೂರು

**ವಿಷಯ**

ಆರೋಗ್ಯ ಮತ್ತು ಸಾಮರಸ್ಯ ಜೀವನಕ್ಕಾಗಿ ಯೋಗ